# ಶ್ರೀರಾಮಕೃಷ್ಣರು ಕರೆದಾಗ

ಸಿ.ಟಿ. ಷಾ

ಶ್ರೀರಾಮಕೃಷ್ಣರು ತಮ್ಮ ಭಕ್ತರನ್ನು ತಾವೇ ಹುಡುಕಿಕೊಂಡು ಹೋಗುತ್ತಾರೆ ಎಂಬುದನ್ನು ಈ ಲೇಖನ ಸೂಚಿಸುತ್ತದೆ. ಶ್ರೀ ಶಾರದಾ ಮಠದಿಂದ ಪ್ರಕಟವಾಗುತ್ತಿರುವ 'ಸಂವಿತ್' ಆಂಗ್ಲಪತ್ರಿಕೆಯ ಮಾರ್ಚ್ ೨೦೦೧ ಸಂಚಿಕೆಯಲ್ಲಿ ಮುದ್ರಿತವಾಗಿರುವ ಈ ಸ್ವಾರಸ್ಯಕರ ಲೇಖನದ ಕನ್ನಡಾನುವಾದ ಮಾಡಿದವರು ಸ್ವಾಮಿ ಆತ್ಮಜ್ಞಾನಂದರು.

**ಭಗವಂತನ ರೀತಿನೀತಿಗಳು ನಿಗೂಢ.** ತನ್ನ ಶಿಶುವನ್ನು ತನ್ನೆಡೆಗೆ ಸೆಳೆದುಕೊಳ್ಳಲು ಕೆಲವೊಮ್ಮೆ ಗಂಭೀರವಾದ, ಆಶ್ಚರ್ಯಕರವಾದ ಹಾಗೂ ಹಾಸ್ಯಮಯ ಸನ್ನಿವೇಶಗಳನ್ನು ಕೂಡ ಸೃಷ್ಟಿಸಿಬಿಡುತ್ತಾನೆ. ನನಗೆ ಅವನ ಕಾರ್ಯಗಳನ್ನು ಅರ್ಥಮಾಡಿಕೊಳ್ಳುವ ಅಥವಾ ತಿಳಿಯುವ ಆಸಕ್ತಿಯಿಲ್ಲ. ನನ್ನ ಅನುಭವದಲ್ಲಿ ಅದನ್ನು ತಿಳಿಯುವುದು ದುಸ್ಸಾಧ್ಯ.

ಗುಜರಾತಿನ ಜೈನಕುಲಕ್ಕೆ ಸೇರಿದ ನಾನು ಬರ್ಮಾದೇಶದ ನಿವಾಸಿಯಾಗಿದ್ದೆ. ಬಹಳ ಹಿಂದೆ ೧೯೫೨ರಲ್ಲಿ ಕಲ್ಕತ್ತೆಗೆ ಪ್ರವಾಸ ಬಂದಿದ್ದೆ. ಆಗ ಬೇಲೂರು ಮಠಕ್ಕೆ ಬಂದಿದ್ದಾಗ ಶ್ರೀರಾಮಕೃಷ್ಣರಿಗೆ ನಮಿಸಿದ ನೆನಪೂ ನನಗಿಲ್ಲ. ಶ್ರೀಶಾರದಾದೇವಿಯವರ ಮಂದಿರವನ್ನು ಕಂಡು, ತನ್ನ ಭಾವಚಿತ್ರವನ್ನು ಸ್ಥಾಪಿಸಿಕೊಳ್ಳಲು ಈಕೆ ಬಹಳಷ್ಟು ಧನಸಹಾಯವನ್ನು ನೀಡಿರಬೇಕೆಂದು ಭಾವಿಸಿದೆ! ಆರತಿಯನ್ನು ಆಲಿಸಿದಾಗ ಶಾಂತಿ, ಧನ್ಯತಾಭಾವಗಳನ್ನು ಅನುಭವಿಸಿದ್ದು ಇಂದಿಗೂ ನೆನಪಿದೆ.

೧೯೫೪ರಲ್ಲಿ ಬರ್ಮಾದಿಂದ ಮುಂಬೈಗೆ ಬಂದು, ತಾಯಿಯ ಒತ್ತಡ ಹಾಗೂ ಅನಾರೋಗ್ಯದ ಕಾರಣಗಳಿಂದ ಲಿಂಬ್ಡಿಗೆ ಬಂದು ನೆಲೆಸಿದೆ. ೧೯೬೬ರಲ್ಲಿ ನನ್ನ ನೆರೆಮನೆಯವರೊಬ್ಬರು ತೀರಿಕೊಂಡಾಗ ಆಯೋಜಿಸಲಾಗಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಭಾಗವಹಿಸಿ ಭಗವಂತನ ಬಳಿಸಾರಲು ಇದೇ ಮಾರ್ಗವೆಂದು ಕಂಡುಕೊಂಡೆ. ಇದೇ ಸಮಯದಲ್ಲಿ ನನ್ನ ಪತ್ನಿಗೆ ಆರೋಗ್ಯ ಹದಗೆಟ್ಟು ಹಾಸಿಗೆ ಹಿಡಿದಿದ್ದಳು. ಒಂದು ರಾತ್ರಿ ಕನಸಿನಲ್ಲಿ ಗಡ್ಡಧಾರಿಯಾದ ಮಹಾಸಂತರೊಬ್ಬರ ದರ್ಶನವಾಗಿ ನನ್ನ ಪತ್ನಿಗೆ ಆಶೀರ್ವಾದ ಮಾಡಿದ ಅಪೂರ್ವ ಘಟನೆ ನಡೆಯಿತು. ಅಂದಿನಿಂದ ಆಕೆಯ ವ್ಯಥೆ ಇಲ್ಲವಾಯಿತು. ಆತನಾರೆಂದು ಆಕೆಗೆ ಗುರುತಿಸಲಾಗಲಿಲ್ಲ. ಹಲವು ತಿಂಗಳ ನಂತರ 'ಅಖಂಡ ಆನಂದ' ಎಂಬ ಗುಜರಾತಿ ಮಾಸಪತ್ರಿಕೆಯಲ್ಲಿ ಶ್ರೀರಾಮಕೃಷ್ಣರ ಕುರಿತು ಲೇಖನವನ್ನು ಓದಿ ಬಹಳ ಪ್ರಭಾವಿತನಾದೆ. ಅದೆಂತಹ ಅಪೂರ್ವ ವ್ಯಕ್ತಿತ್ವ ಅವರದು! ಸಂಕ್ಷಿಪ್ತ ಜೀವನದಿಂದ ದಾಹ ತಣಿಯದೆ ಮತ್ತಷ್ಟು ಪುಸ್ತಕ, ಭಾವಚಿತ್ರಗಳನ್ನು ಖರೀದಿಸಿ ತಂದೆ. ಪತ್ನಿಗೆ ಅವುಗಳನ್ನು ತೋರಿಸುತ್ತಿದ್ದಂತೆ ತನಗೆ ಕನಸಿನಲ್ಲಿ ಅನುಗ್ರಹಿಸಿದ್ದ ಸಂತರು ಶ್ರೀರಾಮಕೃಷ್ಣರೇ ಎಂದು ಗುರುತಿಸಿದಳು. ಭಕ್ತಿಪರವಶತೆಯಿಂದ ಮತ್ತೆ ಮತ್ತೆ ಪ್ರಣಾಮ ಸಲ್ಲಿಸಿದಳು. ನಾನು ಮಂತ್ರಮುಗ್ಧನಂತೆ ನಿಂತುಬಿಟ್ಟೆ! ನನ್ನಲ್ಲಿ ಅಷ್ಟೊಂದು ಪುಸ್ತಕಗಳಿದ್ದರೂ, ನನ್ನ ಮನೆಯವರಿಗೆ ಅವುಗಳನ್ನು ತೋರಿಸಿಯೇ ಇರಲಿಲ್ಲ. ಶ್ರೀರಾಮಕೃಷ್ಣರು ಇದನ್ನೇ ಬಯಸಿದ್ದರೋ ಏನೋ!

ಈ ರೀತಿಯಲ್ಲಿ ಶ್ರೀರಾಮಕೃಷ್ಣರು ನಮ್ಮ ಮನೆಮನಗಳನ್ನು ತುಂಬಿ ೧೩ನೇ ಅಕ್ಟೋಬರ್ ೧೯೬೭ರಿಂದ ನಮ್ಮ ಮನೆತನದ ಆರಾಧ್ಯ ದೇವರಾದರು. ಪ್ರತಿವಾರ ಸತ್ಸಂಗದ ಕಾರ್ಯಕ್ರಮಗಳನ್ನು ಆಯೋಜಿಸಬೇಕೆಂಬ ತೀವ್ರ ಹಂಬಲವುಂಟಾಗಿ ರಾಜಕೋಟೆಯ ಶ್ರೀರಾಮಕೃಷ್ಣ ಆಶ್ರಮವನ್ನು ಸಂಪರ್ಕಿಸಿದೆ. ೧೯೬೭ರ ಅಕ್ಟೋಬರ್ ೨೯ರಂದು ಮೊದಲ ಸತ್ಸಂಗ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ನಗರದ ಪುರಭವನದಲ್ಲಿ ಎರಡು ತಿಂಗಳ ಕಾಲ ಈ ಸತ್ಸಂಗ ಕಾರ್ಯಕ್ರಮವನ್ನು ಪ್ರತಿ ಭಾನುವಾರ ನಡೆಸಿಕೊಂಡು ಬಂದೆವು. ನಮ್ಮದೇ ಒಂದು ಜಾಗವಿದ್ದರೆ ಒಳ್ಳೆಯದು ಎಂದು ಆಲೋಚಿಸಿ ನಗರ ಪಾಲಿಕೆಗೆ ಸೇರಿದ್ದ ಭುಜಾಯ್ ಡೆಲಾ ಎಂಬ ಕಟ್ಟಡದಲ್ಲಿ ಸತ್ಸಂಗ ನಡೆಸಲು ಪ್ರಾರಂಭಿಸಿದೆವು. ಸುಮಾರು ೬೦ ಜನ ಭಕ್ತರು ಸೇರುತ್ತಿದ್ದರು. ಭಜನೆ ಮತ್ತು ಕೆಲವು ಪುಸ್ತಕಗಳನ್ನು ಓದುವುದರ ಜೊತೆಗೆ ವ್ಯವಸ್ಥೆ ಹಾಗೂ ಸೋಮವಾರ, ಶುಕ್ರವಾರಗಳಂದು ವಚನವೇದದ ಪಠನವನ್ನೂ ಪ್ರಾರಂಭಿಸಲಾಯಿತು.

ಭಾಗವಹಿಸುತ್ತಿದ್ದ ಭಕ್ತರಿಗೆ ಸಮಾಜ ಸೇವೆಯಲ್ಲೂ ತೊಡಗಬೇಕೆಂಬ ತೀವ್ರವಾದ ಆಸಕ್ತಿಯುಂಟಾಗಿ ಲಿಂಬ್ಡಿಯ ಸಿವಿಲ್ ಆಸ್ಪತ್ರೆಯ ಟಿ.ಬಿ. ರೋಗಿಗಳಿಗೆ ಅಗತ್ಯವಾದ ಪೌಷ್ಟಿಕ ಆಹಾರವನ್ನು ನೀಡಲು ತೀರ್ಮಾನಿಸಿದೆವು. ವಾರಕ್ಕೆ ಮೂರು ಬಾರಿ ಗಂಜಿ ಹಾಗೂ ಸಜ್ಜಿಗೆಯನ್ನು ನೀಡಲು ಪ್ರಾರಂಭಿಸಿ ನಂತರ ಪ್ರತಿದಿನ ನೀಡುವ ಕಾರ್ಯಕ್ರಮ ಹಮ್ಮಿಕೊಂಡೆವು. ಔಷಧಗಳನ್ನು ಕೂಡ ನೀಡಲು ಪ್ರಾರಂಭಿಸಿ ಅದಕ್ಕೆ ಬೇಕಾದ ಧನಸಂಗ್ರಹವನ್ನು ಮಾಡಲಾರಂಭಿಸಿದೆವು. ಎಲ್ಲರ ಒಪ್ಪಿಗೆ ಪಡೆದು ಶ್ರೀರಾಮಕೃಷ್ಣ ಪ್ರಾರ್ಥನಾ ಮಂದಿರವೆಂಬ ಹೆಸರನ್ನು ಸಂಘಕ್ಕೆ ಇಟ್ಟೆವು ಹಾಗೂ ನಮ್ಮದು ನೋಂದಾಯಿತ ಚ್ಯಾರಿಟೆಬಲ್ ಟ್ರಸ್ಟ್ ಆಯಿತು. ಹಣದ ಅಭಾವ ಇರಲಿಲ್ಲವಾದ್ದರಿಂದ ಆಸ್ಪತ್ರೆಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ಹಾಗೂ ಔಷಧಿಗಳನ್ನು ಉಚಿತವಾಗಿ ನೀಡಲು ಸಾಧ್ಯವಾಯಿತು.

ನಮ್ಮ ಪ್ರಾರ್ಥನಾ ಮಂದಿರಕ್ಕೆ ರಾಜ್‌ಕೋಟ್ ಆಶ್ರಮದ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ಆತ್ಮಸ್ಥಾನಂದಜೀಯವರನ್ನು ಆಹ್ವಾನಿಸಿ ಕಾರ್ಯಕ್ರಮವನ್ನು ಏರ್ಪಡಿಸಿ, ಆಧ್ಯಾತ್ಮಿಕ ಗ್ರಂಥಗಳ ಮಾರಾಟವನ್ನೂ ಕೈಗೊಂಡೆವು. ಇದೇ ಸಮಯದಲ್ಲಿ ಸೂರತ್ತಿನಲ್ಲಿ ಪ್ರವಾಹ ಪರಿಹಾರಕಾರ್ಯವನ್ನು ಹಮ್ಮಿಕೊಳ್ಳಲಾಯಿತು.

ಹೀಗೆ ಸಂಸ್ಥೆ ಬೆಳೆದು ಕಾರ್ಯಕ್ರಮಗಳು ವಿಸ್ತರಿಸಿ, ಭಕ್ತರ ಸಂಖ್ಯೆಯೂ ವೃದ್ಧಿಯಾಯಿತು. ಜಾಗ ಕಿಷ್ಕಿಂಧವಾಗತೊಡಗಿದಾಗ ಲಿಂಬ್ಡಿಯ ರಾಜಮಾತೆಗೆ ಸೇರಿದ ಟವರ್ ಬಂಗಲೆ (ಶಿಖರದ ಅರಮನೆ)ಯನ್ನು ಉಪಯೋಗಿಸಲು ಅನುಮತಿ ಪಡೆಯಲು ಬಯಸಿದೆವು. ರಾಜಮಾತೆ ಬಹಳ ಭಕ್ತಿವಂತೆಯೆಂದು ತಿಳಿದಿತ್ತು. ಆದರೂ ಹಿಂಜರಿಕೆ. ಒಂದು ಭಾನುವಾರ ರಾತ್ರಿ ಮಲಗಿದ್ದಾಗ ಸುಮಾರು ಒಂದು ಗಂಟೆಗೆ ನನಗೆ ಒಂದು ಅಶರೀರವಾಣಿ ಕೇಳಿಸಿತು,: 'ಹೋಗಿ ಕೇಳು, ನಿನಗೆ ಸಿಗುವುದು', ಎಂದು. ನಾನು ಇದು ಎಲ್ಲಿಯದೋ ಭ್ರಮೆ, ಮನಸ್ಸಿನಲ್ಲಿರುವ ಆಲೋಚನೆಗಳೇ ಈ ರೀತಿ ತೋರಿಸಿಕೊಳ್ಳುತ್ತಿವೆ ಎಂದು ಭಾವಿಸಿ ಮತ್ತೆ ಮಲಗಿದೆ. ಪುನಃ ಸುಮಾರು ಒಂದು ಗಂಟೆಯೊಳಗೆ ಅದೇ ಅನುಭವ. ಮತ್ತೆ ನಾನು ಅದನ್ನು ಅಲ್ಲಗಳೆದು ಮಲಗಲು ಯತ್ನಿಸಿದೆ. ಮತ್ತೆ ಅದೇ ಅಶರೀರ ವಾಣಿ. ಈ ಬಾರಿ ಎದ್ದು ಗಡಿಯಾರ ನೋಡಿದೆ. ಬೆಳಗಿನ ಝಾವ ೩.೩೦ಆಗಿತ್ತು. ಬೆಳಗ್ಗೆ ನನ್ನ ಮಗನಿಗೆ ನಡೆದದ್ದನ್ನು ಲೇವಡಿ ಮಾಡುತ್ತಲೇ ತಿಳಿಸಿದೆ. ಅವನೂ ಕೂಡ ಒಮ್ಮೆ ಹೋಗಿ ರಾಜ ಮಾತೆಯನ್ನು ಕಂಡು ಕೇಳಿಬನ್ನಿ ಎಂದು ಸೂಚಿಸಿದಾಗ ನಾನೂ ಕೂಡ ಹೋಗಿ ಭೇಟಿಮಾಡಲು ತೀರ್ಮಾನಿಸಿದೆ. ನಿಗದಿತ ವೇಳೆಗೆ ರಾಜಮಾತೆಯವರನ್ನು ಭೇಟಿಯಾಗಲು ಹೋಗಿ ನಮ್ಮ ಪ್ರಾರ್ಥನಾ ಮಂದಿರದ ಚಟುವಟಿಕೆಗಳನ್ನೆಲ್ಲ ವಿವರಿಸಿದೆ. ಬಹಳ ಆಸಕ್ತಿಯಿಂದ ಎಲ್ಲವನ್ನೂ ಆಲಿಸಿ ಕೂಡಲೆ ಲಿಂಬ್ಡಿಯ ರಾಜಕುಮಾರರಾದ ಠಾಕೂರ್ ಸಾಹೇಬರಿಗೆ ಆಕೆ ಪತ್ರವನ್ನು ಬರೆದುಕೊಟ್ಟರು. ಅಂತೆಯೇ ನಮಗೆ ಆ ಪ್ರಾಸಾದದ ಕೆಳಗಿನ ಅಂತಸ್ತನ್ನು ನೀಡಲಾಯಿತು.

ಈ ಬೆಳವಣಿಗೆಗಳನ್ನೆಲ್ಲಾ ಪೂಜ್ಯ ಸ್ವಾಮಿ ಆತ್ಮಸ್ಥಾನಂದಜಿ ಯವರಿಗೆ ಪತ್ರಮುಖೇನ ತಿಳಿಸಿದೆ. ೧೯೬೮ರ ಅಕ್ಟೋಬರ್ ೨೯ರಂದು ದಿವ್ಯತ್ರಯರ ಭಾವಚಿತ್ರಗಳನ್ನು ಪ್ರತಿಷ್ಠಾಪಿಸಿ ಪೂಜೆಮಾಡುವುದೆಂದು ನಿಗದಿತವಾಯಿತು. ಎಲ್ಲರಿಗೂ ದೊಡ್ಡ ಸಂಭ್ರಮ. ಆ ಶುಭದಿನದಂದು ಸಾಧುಗಳು ಭಕ್ತರು ಭಕ್ತಿಶ್ರದ್ಧೆ ಗಳಿಂದ ಪುಷ್ಪಗಳಿಂದ ಅಲಂಕೃತವಾದ ಭಾವಚಿತ್ರಗಳನ್ನು ಮೆರವಣಿಗೆ ಯಲ್ಲಿ ಕೊಂಡೊಯ್ದು ಕೂಡಿಸಿದಾಗ ಎಂತಹ ಅದ್ಭುತ ಆಧ್ಯಾತ್ಮಿಕ ವಾತಾವರಣವಿತ್ತು! ಆ ದಿನ ಲಿಂಬ್ಡಿಗೇ ವಿಶೇಷವಾದ, ಪವಿತ್ರವಾದ ದಿನವಾಗಿತ್ತು. ನಂತರದ ಸಭೆಯಲ್ಲಿ ಎರಡು ಸಾವಿರ ಜನ ಭಾಗವಹಿಸಿ ದ್ದರು. ಸ್ವಾಮಿಗಳು ಮಾತನಾಡಿದರು. ಒಂದು ವಿಷಯ ನನಗೆ ಬಹಳ ಆಪ್ಯಾಯಮಾನವಾಯಿತು. ಮಹಾಪುರುಷರು ತಾವು ನುಡಿದ ಮಾತನ್ನು ಯಾವಾಗಲೂ ಉಳಿಸಿಕೊಳ್ಳುತ್ತಾರೆ. ಪರಿವ್ರಾಜಕರಾಗಿ ದ್ದಾಗ ಸ್ವಾಮಿ ವಿವೇಕಾನಂದರು ಲಿಂಬ್ಡಿಗೆ ಬಂದಿದ್ದರು. ಅವರಿಂದ ಪ್ರಭಾವಿತರಾಗಿ ಆಗಿನ ರಾಜಕುವರ ಠಾಕೂರ್ ಸಾಹೇಬ್ ಜಸವಂತ್ ಸಿಂಗ್‌ಜಿ ಶಿಷ್ಯತ್ವವನ್ನು ಸ್ವೀಕರಿಸಿ, ಸ್ವಾಮೀಜಿಯವರನ್ನು ಅಲ್ಲಿಯೇ ನೆಲೆಸುವಂತೆ ಕೇಳಿಕೊಂಡಿದ್ದರು. ಅದಕ್ಕೆ ಸ್ವಾಮೀಜಿ ಹೀಗೆ ನುಡಿದಿದ್ದರು : 'ಈಗಲ್ಲ ಮಹಾರಾಜರೆ! ಏಕೆಂದರೆ ನನಗೆ ಈಗ ಕೆಲಸವಿದೆ. ಈಗ ವಿರಮಿಸಲು ಸಾಧ್ಯವಿಲ್ಲ. ಆದರೆ ನಾನೆಂದಾದರೂ ವಿಶ್ರಾಂತ ಜೀವನವನ್ನು ನಡೆಸಲು ಸಾಧ್ಯವಾದರೆ ನಿಮ್ಮಲ್ಲಿಗೇ ಬರುವೆ'. ಇಂದು ಸ್ವಾಮೀಜಿ ತಮ್ಮ ಮಾತನ್ನು ನೆರವೇರಿಸಿದ್ದರು. ಠಾಕೂರ್ ಸಾಹೇಬರ ದಿನಚರಿಯ ಪ್ರಕಾರ



ಲಿಂಬ್ಡಿಯ ಟವರ್ ಬಂಗಲೆ

ಸ್ವಾಮೀಜಿಗೆ ವಿದೇಶಕ್ಕೆ ಹೋಗುವ ಸಲಹೆ ಮೊದಲು ಇವರಿಂದಲೇ ದೊರೆತದ್ದು. ಕಾರ್ಯಕ್ರಮಗಳೆಲ್ಲ ಬಹಳ ಅಚ್ಚುಕಟ್ಟಾಗಿ ನೆರವೇರಿ ದವು ಮತ್ತು ಇಂತಹ ಪ್ರಾರ್ಥನಾ ಮಂದಿರಗಳು ಎಲ್ಲೆಡೆ ಪ್ರಾರಂಭ ವಾಗಿ ಜನರಿಗೆ ಭಕ್ತಿ ಸೇವಾ ಮನೋಭಾವ ನೀಡಬೇಕೆಂದು ಎಲ್ಲರೂ ಹಾರೈಸಿದರು.

ಇದಾದ ಎರಡು ದಿವಸಗಳ ನಂತರ ನನ್ನ ಪತ್ನಿಗೆ ಪುನಃ ಶ್ರೀರಾಮ ಕೃಷ್ಣರು ಕನಸಿನಲ್ಲಿ ದರ್ಶನವಿತ್ತರು. ಅವರ ತಲೆಯ ಮೇಲೆ ಏನೋ ಇತ್ತು. ಅದೇನೆಂದು ಆಕೆಗೆ ಗೊತ್ತಾಗಲಿಲ್ಲ. ಅಂತಹ ಭಾವಚಿತ್ರ ವೇನಾದರೂ ಇದೆಯೇ ಎಂದು ಹುಡುಕಲಾರಂಭಿಸಿದೆ. ಕೆಲವು ದಿನಗಳ ನಂತರ ಪ್ರಾರ್ಥನಾ ಮಂದಿರದ ಕಾರ್ಯಕ್ರಮಗಳ ಚಿತ್ರಗಳನ್ನು ನೋಡುತ್ತಿರುವಾಗ ಅದರಲ್ಲಿನ ಶ್ರೀರಾಮಕೃಷ್ಣರ ಪುಷ್ಪಾಲಂಕೃತ ಭಾವ ಚಿತ್ರವನ್ನು ನೋಡಿ, ಇದನ್ನೇ ನಾನು ಕನಸಿನಲ್ಲಿ ಕಂಡೆ ಎಂದು ನನ್ನ ಪತ್ನಿ ತಿಳಿಸಿದಳು. ಶ್ರೀರಾಮಕೃಷ್ಣರು ತಮ್ಮ ತಲೆಯ ಮೇಲೆ ಹೂಮಾಲೆ ಧರಿಸಿದ್ದರು. ಇದನ್ನು ಕೇಳಿ ಭಕ್ತಿಪರವಶನಾಗಿ ಮತ್ತೆ ಮತ್ತೆ ಅವರ ನಾಮಸ್ಮರಣೆ ಮಾಡಿದೆ.

ಶಿಷ್ಯನ ಮನಸ್ಸು ತಯಾರಾದಾಗ ಗುರು ದಾರಿತೋರಿ, ರಕ್ಷಿಸಿ, ಪರಮಗುರಿಯತ್ತ ಕೊಂಡೊಯ್ಯಲು ಬರುತ್ತಾನೆ ಎಂದು ಶಾಸ್ತ್ರಗಳು ಹೇಳುತ್ತವೆ. ೧೯೬೮ರ ಡಿಸೆಂಬರ್ ೩೧ರಂದು ರಾಮಕೃಷ್ಣ ಮಹಾ ಸಂಘದ ಹತ್ತನೆಯ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ವೀರೇಶ್ವರಾ ನಂದಜಿ ಮಹಾರಾಜರು ಲಿಂಬ್ಡಿಗೆ ಬಂದು, ನಮ್ಮ ಮನೆಯಲ್ಲೇ ನೆಲೆಸಿ, ಮನೆಯವರಿಗೆಲ್ಲಾ ದೀಕ್ಷೆ ನೀಡಿ ಆಶೀರ್ವದಿಸಿದರು. ಹೀಗೆ ಶ್ರೀರಾಮಕೃಷ್ಣರು ಲಿಂಬ್ಡಿಗೆ ಬಂದರು,ನನ್ನ ಜೀವನ ತುಂಬಿದರು, ಮನೆ ತುಂಬಿದರು. ನಾನು ಬಹಳ ಬುದ್ಧಿವಂತ, ಬಲಶಾಲಿ ಹಾಗೂ ಸಮರ್ಥ ಎಂದು ಯಾವಾಗಲೂ ಭಾವಿಸುತ್ತಿದ್ದೆ. ಆದರೆ ಈಗ, ನನ್ನ ಜೀವನದಲ್ಲಾದ ಘಟನೆಗಳನ್ನು ನೋಡಿದಾಗ ಎಲ್ಲವೂ ಶ್ರೀರಾಮ ಕೃಷ್ಣರು ಬಯಸಿದಂತೆ ಆಗುತ್ತದೆ ಎಂಬ ಭಾವನೆ ಮೂಡುತ್ತಿದೆ. ❖